## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 120 (213) |
| ಮಾನ್ಯ ಸದಸ್ಯರ ಹೆಸರು | : | ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ ಜಿಲ್ಲೆ ಹುಮನಾಬಾದ ಪಟ್ಟಣದ ಸರ್ವೆ ನಂ: 474 ರ ಕಟ್ಟಡ ಪರವಾನಿಗೆ ಮತ್ತು ಹಕ್ಕು ಬದಲಾವಣೆಯ ಅಧಿಕೃತ ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ನೀಡಲು ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳು/ತಾಲ್ಲೂಕು ಅಧಿಕಾರಿಗಳು ಮಾಹಿತಿ ನೀಡದೇ ಇರಲು ಕಾರಣವೇನು; | ಬೀದರ ಜಿಲ್ಲೆ ಹುಮನಾಬಾದ ಪಟ್ಟಣದ ಸರ್ವೆ ನಂಬರ: 474 ರ ಕಟ್ಟಡ ಪರವಾನಿಗೆ ಮತ್ತು ಹಕ್ಕು ಬದಲಾವಣೆಯ ಅಧಿಕೃತ ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿಯನ್ನು ದಿನಾಂಕ: 29-10-2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕರಿಗೆ ಹುಮನಾಬಾದ ಪುರಸಭೆಯಿಂದ ಖುದ್ದಾಗಿ ನೀಡಲಾಗಿದೆ. ಅದರ ಸ್ವೀಕೃತಿ ಪ್ರತಿಯನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ. | ಸರ್ವೆ ನಂ: 474 ಸಂಪೂರ್ಣ ಮಾಹಿತಿ (ವಿವರ ಒದಗಿಸುವುದು) | ಸರ್ವೆ ನಂಬರ: 474 ರಲ್ಲಿ 1088 ಆಸ್ತಿಗಳು ಇದ್ದು, ಸಂಪೂರ್ಣ ಮಾಹಿತಿಯ ವಿವರ ಮತ್ತು ದಾಖಲೆಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಇ. | ಈ ಕಟ್ಟಡದ ದಾಖಲೆ ನೀಡಲು ವಿಳಂಬ ಧೋರಣೆ ತೋರುತ್ತಿರುವ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುವ ಕ್ರಮ ಹಾಗೂ ಯಾವ ಕಾಲಮಿತಿಯೊಳಗೆ ದಾಖಲೆ ನೀಡಲಾಗುವುದು. | ಸದರಿ ಸರ್ವೆ ನಂಬರಗೆ ಸಂಬಂಧಪಟ್ಟಂತೆ ಕಟ್ಟಡದ ದಾಖಲೆಗಳೊಂದಿಗೆ ಮಾಹಿತಿಯನ್ನು ದಿನಾಂಕ: 23-10-2024 ಹಾಗೂ 29-11-2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕರಿಗೆ ಹುಮನಾಬಾದ ಪುರಸಭೆಯಿಂದ ಖುದ್ದಾಗಿ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ. ಸದರಿ ವಿಷಯದಲ್ಲಿ ಯಾವುದೇ ವಿಳಂಬ ಧೋರಣೆ ಆಗಿರುವುದಿಲ್ಲ. |
| ಈ. | ಈ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಆಸ್ತಿಯಾಗಿರುವ ಈ ಕಟ್ಟಡದ ಸರ್ಕಾರ ಸದರಿ ಆಸ್ತಿ ಬಗ್ಗೆ ನಿಷ್ಕಾಳಜಿ ತೋರಿಸುತ್ತಿರುವುದು ಸರಿಯೇ? | ಸರ್ವೆ ನಂಬರ 474 ರಲ್ಲಿ 1088 ನಿವೇಶನ/ಕಟ್ಟಡಗಳು ಇದ್ದು, ಇದರಲ್ಲಿ ಹೌಸಿಂಗ ಸೊಸೈಟಿ, ಹೌಸಿಂಗ್ ಬೋರ್ಡ ಬ್ಯಾಕವರ್ಡ್ ಸೊಸೈಟಿ, ಸರ್ಕಾರಿ 'ಡಿ' ಗ್ರೂಪ್ ನೌಕರರ ಬಡಾವಣೆಗಳು ಇರುತ್ತವೆ. ಪುರಸಭೆಗೆ ಸಂಬಂಧಿಸಿದ 74 ಆಸ್ತಿಗಳು ಇದ್ದು, ಸದರಿ ಆಸ್ತಿಗಳನ್ನು ಪುರಸಭೆಯ ಸಿಬ್ಬಂದಿಗಳಿಗೆ 1987-88ರಲ್ಲಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಕಟ್ಟಡ / ಆಸ್ತಿಗಳ ಬಗ್ಗೆ ಯಾವುದೇ ನಿಷ್ಕಾಳಜಿ ತೋರಿರುವುದಿಲ್ಲ. |

ಸಂಖ್ಯೆ: ನಅಇ 244 ಜಿಇಎಲ್ 2024 (ಇ)

(ರಹೀಂಖಾನ್)
**ಪೌರಾಡಳಿತ ಮತ್ತು ಹಜ್ ಸಚಿವರು**